**ಪಂಕಜ್ ಕುಮಾರ್ ಪಾಂಡೆ. ಭಾ.ಆ.ಸೇ.,**
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಇ-ಆಡಳಿತ) ಹಾಗೂ
ನಿರ್ದೇಶಕರು, ಸಕಾಲ ಮಿಷನ್

ಕರ್ನಾಟಕ ಸರ್ಕಾರದ ಸಚಿವಾಲಯ
ನಂ. 106, 1ನೇ ಮಹಡಿ, 2ನೇ ಹಂತ,
ಬಹುಮಹಡಿಗಳ ಕಟ್ಟಡ, ಬೆಂಗಳೂರು-560 001
ದೂರವಾಣಿ: ಸಂಖ್ಯೆ: 080-22032633 / 22353953
ಇ-ಮೇಲ್ : secyegov@karnataka.gov.in

ಪತ್ರ ಸಂಖ್ಯೆ: ಸಿಆಸುಇ(ಇ-ಆ)40 ಸಪ್ರಕಾ 2026 ದಿನಾಂಕ:20.06.2026.

ಮಾನ್ಯರೇ,

ವಿಷಯ:- ಕರ್ನಾಟಕ ರಾಜ್ಯ ದತ್ತಾಂಶ ಕೇಂದ್ರದ ನಿಗದಿತ ನಿರ್ವಹಣಾ ಚಟುವಟಿಕೆಯ ಕಾರಣದಿಂದ 25 ಮತ್ತು 26ನೇ ಜೂನ್-2026 ರಂದು ಅಪ್ಲಿಕೇಶನ್‌ಗಳು/ಪೋರ್ಟಲ್‌ಗಳು ಸ್ಥಗಿತಗೊಳ್ಳುವ (Downtime) ಬಗ್ಗೆ ಪ್ರಚಾರ ಪಡಿಸುವ ಕುರಿತು.

****

ಕರ್ನಾಟಕ ರಾಜ್ಯ ದತ್ತಾಂಶ ಕೇಂದ್ರದಲ್ಲಿನ (KSDC) ಪ್ರಮುಖ ಮೂಲಸೌಕರ್ಯಗಳನ್ನು ಉನ್ನತೀಕರಿಸಿ ಸುಧಾರಿತ ಸೇವೆಯನ್ನು ಒದಗಿಸುವ ಸಲುವಾಗಿ, **25ನೇ ಜೂನ್ 2026 ರ ರಾತ್ರಿ 9:00 ಗಂಟೆಯಿಂದ 26ನೇ ಜೂನ್ 2026 ರ ರಾತ್ರಿ 9:00 ಗಂಟೆಯವರೆಗೆ (ಒಟ್ಟು 24 ಗಂಟೆಗಳ ಕಾಲ)** ನಿಗದಿತ ನಿರ್ವಹಣಾ ಚಟುವಟಿಕೆಯನ್ನು (Maintenance Activity) ಹಮ್ಮಿಕೊಳ್ಳಲಾಗಿದೆ.

ಅದರಂತೆ, ಕರ್ನಾಟಕ ರಾಜ್ಯ ದತ್ತಾಂಶ ಕೇಂದ್ರದಲ್ಲಿ ಹೋಸ್ಟ್ ಮಾಡಲಾಗಿರುವ ಎಲ್ಲಾ ನಾಗರಿಕ ಸ್ನೇಹಿ ಮತ್ತು ಆಂತರಿಕ ವೆಬ್‌ಸೈಟ್‌ಗಳು, ಅಪ್ಲಿಕೇಶನ್‌ಗಳು, ಪೋರ್ಟಲ್‌ಗಳು ಮತ್ತು ಸೇವೆಗಳು ಈ ಅವಧಿಯಲ್ಲಿ ಸ್ಥಗಿತಗೊಂಡಿರುತ್ತವೆ.

ಈ ನಿಟ್ಟಿನಲ್ಲಿ, ತಮ್ಮ ಅಧೀನದಲ್ಲಿ ಬರುವ ಎಲ್ಲಾ ಇಲಾಖೆಗಳು, ಸ್ವಾಯತ್ತ ಸಂಸ್ಥೆಗಳು, ಮಂಡಳಿಗಳು, ನಿಗಮಗಳು, ಆಯೋಗಗಳು, ಸಂಘ-ಸಂಸ್ಥೆಗಳು, ಜಿಲ್ಲಾ ಮಟ್ಟದ ಕಛೇರಿಗಳು ಮತ್ತು ಇತರ ಯಾವುದೇ ಪ್ರಾಧಿಕಾರಗಳು ಕರ್ನಾಟಕ ರಾಜ್ಯ ದತ್ತಾಂಶ ಕೇಂದ್ರದಲ್ಲಿ ಹೋಸ್ಟ್ ಮಾಡಿರುವ ವೆಬ್‌ಸೈಟ್‌ಗಳು, ಅಪ್ಲಿಕೇಶನ್‌ಗಳು, ಪೋರ್ಟಲ್‌ಗಳು ಮತ್ತು ಸೇವೆಗಳು ಈ ಅವಧಿಯಲ್ಲಿ ಕಾರ್ಯನಿರ್ವಹಿಸದೇ ಇರುವ ಕುರಿತು ಪ್ರಚಾರ ಪಡಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲು ನಿರ್ದೇಶಿಸುವಂತೆ ಈ ಮೂಲಕ ಕೋರಲಾಗಿದೆ:

1. ನಿಗದಿತ ಸ್ಥಗಿತದ (Downtime) ಕುರಿತು ಸಾರ್ವಜನಿಕರು, ಪಾಲುದಾರರು ಮತ್ತು ಬಳಕೆದಾರರಿಗೆ ಸ್ಪಷ್ಟವಾಗಿ ತಿಳಿಸಲು ಎಲ್ಲಾ ವೆಬ್‌ಸೈಟ್‌ಗಳು, ಅಪ್ಲಿಕೇಶನ್‌ಗಳು, ಪೋರ್ಟಲ್‌ಗಳು ಮತ್ತು ಸೇವೆಗಳಲ್ಲಿ ಪ್ರಮುಖವಾಗಿ ರನ್ನಿಂಗ್ ಬ್ಯಾನರ್ (Running banner) ಅಥವಾ ಅಧಿಸೂಚನೆ ಸಂದೇಶವನ್ನು ಈ ಕೆಳಕಂಡಂತೆ ಪ್ರದರ್ಶಿಸತಕ್ಕದ್ದು:

- **ಕನ್ನಡ:-**

  *"ಕರ್ನಾಟಕ ರಾಜ್ಯ ದತ್ತಾಂಶ ಕೇಂದ್ರದಲ್ಲಿನ ನಿಗದಿತ ನಿರ್ವಹಣಾ ಚಟುವಟಿಕೆಯ ಕಾರಣದಿಂದಾಗಿ, ಈ ಅಪ್ಲಿಕೇಶನ್/ಪೋರ್ಟಲ್ 25 ಜೂನ್ 2026 ರ ರಾತ್ರಿ 9:00 ಗಂಟೆಯಿಂದ 26 ಜೂನ್ 2026 ರ ರಾತ್ರಿ 9:00 ಗಂಟೆಯವರೆಗೆ ಲಭ್ಯವಿರುವುದಿಲ್ಲ. ಅಡಚಣೆಗಾಗಿ ವಿಷಾದಿಸುತ್ತೇವೆ."*

- **English: -**

  *"Due to scheduled maintenance activity at the Karnataka State Data Centre, this application/portal will not be available from 25th June 2026, 9:00 PM to 26th June 2026, 9:00 PM. The inconvenience caused is deeply regretted."*

**2.** ಪ್ರತಿಯೊಂದು ಇಲಾಖೆ ಮತ್ತು ಅದರ ಅಧೀನ ಸಂಸ್ಥೆಗಳ ಸಂಬಂಧಪಟ್ಟ ತಾಂತ್ರಿಕ ತಂಡಗಳಿಗೆ ಈ ಬಗ್ಗೆ ಮುನ್ನೆಚ್ಚರಿಕೆ ನೀಡುವುದು. ಅಲ್ಲದೆ, ನಿರ್ವಹಣಾ ಅವಧಿ ಮುಗಿದ ತಕ್ಷಣ ಸೇವೆಗಳನ್ನು ತ್ವರಿತವಾಗಿ ಪೂರ್ವಸ್ಥಿತಿಗೆ ತರಲು ಹಾಗೂ ಅಪ್ಲಿಕೇಶನ್‌ಗಳ ಕಾರ್ಯನಿರ್ವಹಣೆಯನ್ನು ಪರಿಶೀಲಿಸಲು ತಾಂತ್ರಿಕ ಸಿಬ್ಬಂದಿ ಲಭ್ಯವಿರುವಂತೆ ನಿರ್ದೇಶಿಸುವುದು.

**3.** ಈ ಕುರಿತು ಸಾರ್ವಜನಿಕರಿಗೆ ವ್ಯಾಪಕ ಪ್ರಚಾರ ಹೊರಡಿಸುವುದು.

ಈ ವಿಷಯವು ಸಮಯ-ಸೂಕ್ಷ್ಮವಾಗಿರುವುದರಿಂದ, ತಮ್ಮ ಅಧೀನದಲ್ಲಿರುವ ಎಲ್ಲಾ ಇಲಾಖೆಗಳು, ಸ್ವಾಯತ್ತ ಸಂಸ್ಥೆಗಳು, ಮಂಡಳಿಗಳು, ನಿಗಮಗಳು, ಆಯೋಗಗಳು, ಸಂಘ-ಸಂಸ್ಥೆಗಳು, ಜಿಲ್ಲಾಮಟ್ಟದ ಕಛೇರಿಗಳು ಮತ್ತು ಇತರ ಪ್ರಾಧಿಕಾರಗಳದ ಅಧಿಕಾರಿಗಳು ಕೂಡಲೇ ಕ್ರಮಕೈಗೊಳ್ಳುವಂತೆ ನಿರ್ದೇಶಿಸಲು ಕೋರಲಾಗಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

**ರವರಿಗೆ:**

1. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು / ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು / ಇಲಾಖಾ ಮುಖ್ಯಸ್ಥರುಗಳು, ಕರ್ನಾಟಕ ಸರ್ಕಾರ.
2. ಎಲ್ಲಾ ಜಿಲ್ಲಾಧಿಕಾರಿಗಳಿಗೆ- ಸಾರ್ವಜನಿಕ ಪ್ರಕಟಣೆಗಾಗಿ.

**ಪ್ರತಿಯನ್ನು ಮಾಹಿತಿಗಾಗಿ:-**

1. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ.
2. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಇ-ಆಡಳಿತ ಕೇಂದ್ರ.
3. ಯೋಜನಾ ನಿರ್ದೇಶಕರು, ಕರ್ನಾಟಕ ರಾಜ್ಯ ದತ್ತಾಂಶ ಕೇಂದ್ರ (KSDC), ಇ-ಆಡಳಿತ ಕೇಂದ್ರ.